**ದಿ:13.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ. **D.V.N.,** ವಕೀಲರಿಂದ:-

ನನ್ನ ತಂದೆ ಚನ್ನಬಸಪ್ಪರವರು ಮರಣ ಹೊಂದಿ ಈ ಸುಮಾರು 30 ವರ್ಷ ಆಗಿರುತ್ತದೆ . ದಾವಾ ಆಸ್ತಿಗಳು ಎಲ್ಲಾವು ನಮ್ಮ ತಂದೆಗೆ ಪಿರ್ತಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿ. ನನ್ನ ತಂದೆ ಚನ್ನಬಸಪ್ಪರವರ ಮೊದಲನೆ ಹೆಂಡತಿ ಪಾರ್ವತಮ್ಮರವರಿಗೆ ಕಲ್ಲೇಶ್ ಮತ್ತು ವಾದಿ ಕಲಾವತಿ ಎಂಬ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ ಕಲ್ಲಮ್ಮ ಇರುತ್ತಾರೆ , ಕಲ್ಲೇಶ್ ಎಂಬುವವರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . ಸದರಿ ಕಲ್ಲೇಶ್ ರವರು ನಮ್ಮ ತಂದೆ ಮರಣಹೊಂದುವ ಪೂರ್ವದಲ್ಲೇ ತೀರಿಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಚನ್ನಬಸಪ್ಪರವರು ಮರಣಹೊಂದಿದ ನಂತರ ದಾವಾ ಆಸ್ತಿಗಳು ನಮ್ಮ ತಾಯಿ ಪ್ರತಿವಾದಿ 2 ರವರ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ಜಂಟಿ ಖಾತೆ ಆಗಿರುತ್ತದೆ ಎಂದು ಹೇಳುತ್ತಾರೆ . ನಾವು ನಮ್ಮ ತಂದೆ ಚನ್ನಬಸಪ್ಪರವರು ಮರಣಹೊಂದಿದ ನಂತರ ದಾವಾ ಆಸ್ತಿಗಳ ವಿಚಾರವಾಗಿ ಪಾಲುವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ವಾದಿ ಕಲಾವತಿಯವರು ಈ ಸುಮಾರು 3 ವರ್ಷದ ಹಿಂದೆ ನಮ್ಮ ಬಳಿ ಬಂದು ದಾವಾ ಆಸ್ತಿಗಳಲ್ಲಿ ತನ್ನ ಪಾಲು ನೀಡಬೇಕೆಂದು ಕೇಳಿರುತ್ತಾರೆ ಎಂದರೆ ಸಾಕ್ಷಿ 5 ವರ್ಷದ ಹಿಂದೆ ಕೇಳಿರುತ್ತಾರೆ ಎಂದು ಹೇಳುತ್ತಾರೆ . ವಾದಿ ಕಲಾವತಿಯವರು 5 ವರ್ಷದ ಹಿಂದೆನಮ್ಮನ್ನು ಬಂದು ಭಾಗ ನೀಡಲು ಕೇಳಿರುತ್ತಾರೆ ನಾವು ಅವರಿಗೆ ಮುಂದೂಡುತ್ತಾ ಬಂದಿದ್ದು , ಪುನ: ಸನ್ 2022 ರಲ್ಲಿ ರವರು ದಾವಾ ಆಸ್ತಿಗಳಲ್ಲಿ ವಿಭಾಗ ಮಾಡಿಕೊಡಲು ನಮ್ಮಲ್ಲಿ ಕೇಳಿರುತ್ತಾರೆ ಎಂದರೆ ಸರಿ. ಆಗ ನಾವು ವಾದಿ ಕಲಾವತಿಯವರಿಗೆ ಪಾಲು ನೀಡುವುದಿಲ್ಲ ಸಮಪಾಲು ಬೇಕೆಂದರೆ ನ್ಯಾಯಾಲಯಕ್ಕೆ ಹೋಗಿ ಎಂದು ತಿಳಿಸಿರುತ್ತೀರ ಎಂದರೆ ಸಾಕ್ಷಿ ನಾವು ಅವರಿಗೆ ಸರ್ವೆ ನಂಬರ್ 14 ರಲ್ಲಿ 2 ಎಕರೆ ಜಮೀನನ್ನು ನೀಡಿರುತ್ತೇವೆ ಎಂದು ಹೇಳುತ್ತಾರೆ . ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ನ 2 ಎಕರೆ ಜಮೀನು ವಾದಿಯ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಪ್ರತಿವಾದಿ 1 , 2 ಮತ್ತು 4 ರವರಿಗೆ ಪಾಲು

ಆಗಿರುವುದಿಲ್ಲ , ಜಂಟಿ ಆಗಿರುತ್ತದೆ ಎಂದರೆ ಸರಿ . ವಾದಿ ಕಲಾವತಿಗೆ ದಾವಾ ಆಸ್ತಿಯಲ್ಲಿ ಬರಬೇಕಾದಂತ ಪಾಲು ನೀಡಲು ಯಾವುದೇ ತಕರಾರು ನಮಗೆ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಪಾಲುನ್ನು ದಾಖಲೆ ಮೂಲಕ ಖಾತೆ ಮಾಡಿಕೊಡಲು ನನಗೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ನಾನು ವಾದಿಗೆ ಪಾಲು ನೀಡಬಾರದು ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ತಕರಾರರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಮಾರು 18 ವರ್ಷದ ಹಿಂದೆಯೇ ಪಾಲುವಿಭಾಗ ಆಗಿರುವ ಬಗ್ಗೆ ಸುಳ್ಳು ಮಾಹಿತಿ ಸಲ್ಲಿಸಿ , ನ್ಯಾಯಾಲಯಕ್ಕೆ ಸುಳ್ಳು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಇದುವರೆಗೂ ಯಾರಿಗೂ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸರಿ. ವಾದಿಗೆ ಸಮಪಾಲು ನೀಡಬೇಕಾಗುತ್ತದೆ ಎಂದು ಸುಳ್ಳು ತಕರಾರು ಸಲ್ಲಿಸಿ , ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು